
ಅವರು ಕುಣಿಯುವಾಗ ಇನ್ನೂ ಉದ್ದ ಕಾಣುವರು. ತಮ್ಮ ದನಗಳನ್ನು ಬಹಳ ಪ್ರೀತಿಸುವರು. ಕೊಲ್ಲುವುದಿಲ್ಲ. ಅವುಗಳ ಕುತ್ತಿಗೆ ಪಂಕ್ಚರ್ ಮಾಡಿ ರಕ್ತತೆಗೆದು ಹಾಲಿನ ಜೊತೆ ಬೆರೆಸಿ ಕುಡಿಯುವರು. ಕೆಲವು ಬುಡಕಟ್ಟುಗಳಲ್ಲಿ ಪರಸ್ಪರ ಹಗೆತನವಿದೆ. ಅವು ಹೊಡೆದಾಡುತ್ತವೆ. ಅವು ತಮ್ಮದೇ ಜನರನ್ನು ಮರಕ್ಕೆ ಕಟ್ಟಿಹಾಕಿ ಕೊಲ್ಲುವ, ಕಡಿದು ಎಸೆದ ದೇಹಗಳ ತುಂಬ ನೊಣ ಕೂತಿರುವ ಪಟಗಳನ್ನು ತೆಗೆದಿರುವೆ. ಆಫ್ರಿಕನ್ ಬುಡಕಟ್ಟು ಕೊಲೆಗಳು ಬಹಳ ಅಮಾನುಷ.

**◆ ಬುಡಕಟ್ಟುಗಳು ಇಂತಹ ಅಂತರ್ ಸಂಘರ್ಷಗಳಾಚೆ ತಮ್ಮ ಹಕ್ಕುಗಳಿಗಾಗಿ ಒಗ್ಗೂಡುತ್ತಿದ್ದರು. ಕಮ್ಯುನಿಸ್ಟ್ ಪಾರ್ಟಿಯಿತ್ತು ಎಂದೂ ಗೂಗಿ ಬರೆಯುತ್ತಾರೆ.**

ಇರಬಹುದು. ನನಗದರ ಬಗ್ಗೆ ಹೆಚ್ಚಿನ ಮಾಹಿತಿಯಿಲ್ಲ.

**◆ ಕೀನ್ಯಾದ ಪ್ರಜಾಪ್ರಭುತ್ವ ಹೇಗಿದೆ?**

ಆಫ್ರಿಕಾದವು ನಿಜವಾದ ಪ್ರಜಾಪ್ರಭುತ್ವಗಳಲ್ಲ. ಚುನಾವಣೆಯಿಂದ ಆರಿಸಿ ಬಂದು ಸರ್ವಾಧಿಕಾರಿಗಳಾದವರೇ ಹೆಚ್ಚು. ಸಂವಿಧಾನ ಇದೆ. ಕಾನೂನಿನ ಆಳ್ವಿಕೆಯಿದೆ. ತಪ್ಪಾದರೆ ಸಂವಿಧಾನ, ಕಾನೂನು ಉಲ್ಲೇಖಿಸಿ ಜನ ಟೀಕೆ ಕೂಡ ಮಾಡುತ್ತಾರೆ. ಪ್ರಜಾಪ್ರಭುತ್ವ ನೆಲೆಗೊಳ್ಳಲು ಸಮಯ ಹಿಡಿಯುತ್ತದೆ. ಯೂರೋಪಿಯನ್ ದೇಶಗಳಿಗೆ ಪ್ರಜಾಪ್ರಭುತ್ವದ ದಾರಿಗೆ ಬರಲು ಮೂರು ಶತಮಾನ ಬೇಕಾದವು. ಆಫ್ರಿಕನ್ ದೇಶಗಳಿಗೂ ಸಮಯ ಬೇಕು. ಈಗ ಅಲ್ಲಿನ ದೇಶಗಳೆಲ್ಲ ಕೂಡಿಕೊಂಡು ಆಫ್ರಿಕನ್ ಯೂನಿಯನ್ ಮಾಡಿಕೊಂಡಿವೆ. ಯಾವುದಾದರೂ ದೇಶದಲ್ಲಿ ಸರ್ಕಾರ ಜನವಿರೋಧಿ ಆಗಿದ್ದರೆ, ಈ ಯೂನಿಯನ್ 'ಕೂಡಲೇ ನಿಲ್ಲಿಸಿ. ಇಲ್ಲದಿದ್ದರೆ ಯೂನಿಯನ್ ಸೈನ್ಯ ಕಳಿಸುತ್ತೇವೆ' ಎಂದು ಎಚ್ಚರಿಸುತ್ತದೆ.



ವಾರೆನೋಟ....

**◆ ಭಾರತೀಯ ಸಮುದಾಯಗಳ ಒಳಗಿನ ಸಂಬಂಧಗಳು ಹೇಗಿವೆ?**

ವ್ಯಾಪಾರಿಗಳಲ್ಲಿ ವ್ಯಾವಹಾರಿಕ ಕಾರಣಕ್ಕೆ ಸ್ನೇಹ ಇದೆ. ಅಷ್ಟೇ ಪ್ರಮಾಣದಲ್ಲಿ ಬೆನ್ನಿಗೆ ಇರಿಯುವ ದುಷ್ಟತನವೂ ಇದೆ. 'ಓ ಸಾಲಾ ಪಂಜಾಬಿ, ಏ ಸಾಲಾ ಗುಜರಾತಿ' ಎಂದು ಬೈದಾಡುತ್ತಲೇ ಇರುತ್ತಾರೆ. ಒಮ್ಮೆ ಬ್ರಿಟಿಷರು ಭಾರತೀಯ ಮೂಲದವರನ್ನು ಒಂದು ಜೈಲಿಗೆ ಹಾಕಿದರಂತೆ. ಅವರೆಲ್ಲ ಜೈಲಿನಲ್ಲಿ ಹೇಗೆ ತಪ್ಪಿಸಿಕೊಳ್ಳಬಹುದು ಎಂದು ಮೀಟಿಂಗ್ ಮಾಡಿದರಂತೆ. ಬೊಹ್ರಾಗಳು, ಗೋವನ್ನರು, ಗುಜರಾತಿಗಳು ಒಬ್ಬೊಬ್ಬರಾಗಿ ಗೋಡೆ ಹತ್ತಿ ತಪ್ಪಿಸಿಕೊಂಡರಂತೆ. ಆದರೆ ಪಂಜಾಬಿಗಳಿಗೆ ಹೊರಬರಲು ಸಾಧ್ಯವಾಗಲೇ ಇಲ್ಲವಂತೆ. ಕಾರಣ ಒಬ್ಬ ಗೋಡೆ ಏರಿದರೆ, ಮತ್ತೊಬ್ಬ ಕಾಲು ಎಳೆಯುತ್ತಿದ್ದನಂತೆ.

**◆ ನೀವು ಫೋಟೊಗ್ರಫಿಗೆ ಹೋಗಲು ಪ್ರೇರಣೆಯೇನು?**

ಬ್ರಿಟಿಷ್ ಸರ್ಕಾರ ಅಪ್ಪನ ಪತ್ರಿಕೆಗೆ ಜಾಹೀರಾತು ಕೊಡುವುದ ನಿಲ್ಲಿಸಿತು. ನಮ್ಮ ಪ್ರೆಸ್ಸಿಗೆ ಬೆಂಕಿಯನ್ನೂ ಹಚ್ಚಲಾಯಿತು. ನನಗಾಗ ಹನ್ನೊಂದು ವರ್ಷ. ಅಣ್ಣ-ಅಪ್ಪ, ಪ್ರೆಸ್ಸಿನ ಒಳಗಿದ್ದ ಕಾಗದ ಹೊರತರುವುದಕ್ಕೆ, ಬೆಂಕಿ ಆರಿಸುವುದಕ್ಕೆ ಮಾಡಿದ ಸೆಣಸಾಟ ನೆನಪಿದೆ. ಅಂದಿನಿಂದ ಕುಟುಂಬದ ಅಧೋಗತಿ